# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1395 (1478)**
**ಸದಸ್ಯರ ಹೆಸರು : ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**
**ಉತ್ತರಿಸಬೇಕಾದ ದಿನಾಂಕ : 17.03.2026**
**ಉತ್ತರಿಸಬೇಕಾದ ಸಚಿವರು : ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು**

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕಲಬುರಗಿ ನಗರ ವ್ಯಾಪ್ತಿಯಲ್ಲಿ ರಸ್ತೆ ನಿರ್ಮಾಣಕ್ಕಾಗಿ ಸ್ವಾಧೀನ ಪಡಿಸಿಕೊಂಡಿರುವ ಸಾರ್ವಜನಿಕರ ಆಸ್ತಿಗಳ ಸಂಖ್ಯೆ ಎಷ್ಟು; ಹಾಗೂ ಎಷ್ಟು ಕೋಟಿ ಪರಿಹಾರ ನೀಡಬೇಕಾಗುತ್ತದೆ; (ವಿವರ ನೀಡುವುದು) | ಕಲಬುರಗಿ ನಗರದಲ್ಲಿ 2010ರಲ್ಲಿ ರಸ್ತೆ ಅಗಲೀಕರಣ ಕಾರ್ಯ ನಡೆದಿದ್ದು, ಮುಖ್ಯಮಂತ್ರಿಗಳ ವಿಶೇಷ 100 ಕೋಟಿ ಅನುದಾನದಲ್ಲಿ ನಡೆದಿರುತ್ತದೆ. ಈ ಯೋಜನೆಯಲ್ಲಿ ಕಲಬುರಗಿ ನಗರದ ಈ ಕೆಳಕಂಡ 4 ಪ್ರಮುಖ ರಸ್ತೆಗಳನ್ನು ಅಗಲೀಕರಣಗೊಳಿಸಲಾಗಿದೆ:-<br>1. ಜಗತ್ ವೃತ್ತದಿಂದ ಹುಮನಾಬಾದ ಬೇಸ್ ವರೆಗೆ.<br>2. ಸರದಾರ ವಲ್ಲಭಭಾಯಿ ಪಟೇಲ್ ವೃತ್ತದಿಂದ ಎಮ್.ಎಸ್.ಕೆ. ಮಿಲ್ ವರೆಗೆ ವಯಾ ರಾಷ್ಟ್ರಪತಿ ವೃತ್ತ.<br>3. ಸರದಾರ ವಲ್ಲಭಭಾಯಿ ಪಟೇಲ ವೃತ್ತದಿಂದ ಆಳಂದ ಚೆಕ್ ಪೋಸ್ಟ ವರೆಗೆ.<br>4. ರಾಷ್ಟ್ರಪತಿ ವೃತ್ತದಿಂದ ರಾಮ ಮಂದಿರ ವರೆಗೆ.<br>ಮೇಲ್ಕಂಡ 4 ರಸ್ತೆಗಳ ಎಡ-ಬಲ ಸೇರಿ ಒಟ್ಟು 289 ಆಸ್ತಿಗಳನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ.<br>ಜಗತ್ ವೃತ್ತದಿಂದ ಹುಮನಾಬಾದ ಬೇಸ್ ವರೆಗೆ ಇರುವ ಸ್ವತ್ತುಗಳಿಗೆ ಮಾನ್ಯ ನ್ಯಾಯಾಲಯದ ಆದೇಶದಂತೆ ಕೆಲವು ಸ್ವತ್ತುಗಳಿಗೆ ರೂ. 14,300 ಪ್ರತಿ ಚ.ಅಡಿ ರಂತೆ, ಕೆಲ ಸ್ವತ್ತುಗಳಿಗೆ ಭೂಸ್ವಾಧಿನಾಧಿಕಾರಿಗಳು ನಿರ್ಧರಿಸಿದ ಮೊತ್ತದ ಮೇಲೆ 60%ರಷ್ಟು ಹೆಚ್ಚು, ಹಾಗೂ ಇನ್ನೂ ಕೆಲವು ಸ್ವತ್ತುಗಳಿಗೆ ಭೂಸ್ವಾಧಿನಾಧಿಕಾರಿಗಳು ನಿರ್ಧರಿಸಿದ ಮೊತ್ತದ ಮೇಲೆ 50%ರಷ್ಟು ಹೆಚ್ಚು ಪರಿಹಾರ ನೀಡಬೇಕಾಗಿರುತ್ತದೆ.<br>ಈ ಹಿನ್ನೆಲೆಯಲ್ಲಿ ಸರಿಸುಮಾರು ರೂ. 300 ಕೋಟಿ ಹೆಚ್ಚುವರಿ ಪರಿಹಾರ ನೀಡಬೇಕಾಗಿರುತ್ತದೆ. |
| (ಆ) | ರಸ್ತೆ ನಿರ್ಮಾಣಕ್ಕಾಗಿ ಸ್ವಾಧೀನ ಪಡಿಸಿಕೊಂಡಿರುವ ಸಾರ್ವಜನಿಕರ ಆಸ್ತಿಗಳಿಗೆ ಸೂಕ್ತ ಪರಿಹಾರ ನೀಡಲಾಗಿದೆಯೇ; ನೀಡಿದ್ದಲ್ಲಿ, ಪರಿಹಾರದ ಮೊತ್ತ ಎಷ್ಟು ಹಾಗೂ ಯಾವ ಮಾನದಂಡವನ್ನು ಅನುಸರಿಸಿ ಪರಿಹಾರ ಮೊತ್ತವನ್ನು ನಿಗದಿ ಮಾಡಲಾಗಿದೆ; (ಆದೇಶದ ಪ್ರತಿ ನೀಡುವುದು) | ಭೂಸ್ವಾಧಿನ ಅಧಿನಿಯಮ, 1894ರಲ್ಲಿ ಸೂಚಿಸಿರುವಂತೆ ಪ್ರತಿ ಪ್ರದೇಶದ 2010ಕ್ಕೂ ಮೊದಲಿನ 3 ವರ್ಷಗಳ ಕ್ರಯ ಪತ್ರಗಳನ್ನು ಉಪ-ನೊಂದಣಾಧಿಕಾರಿಗಳ ಕಚೇರಿಯಿಂದ ಪಡೆದು, ಪ್ರತಿ ಪ್ರದೇಶದ ಸರಾಸರಿ ಮಾರುಕಟ್ಟೆ ಬೆಲೆಯನ್ನು ನಿರ್ಧರಿಸಿರುತ್ತಾರೆ. ಅದರಂತೆ, ಒಟ್ಟಾರೆಯಾಗಿ ರೂ. 26,95,49.164.00 ಹಣವನ್ನು ಪರಿಹಾರ ರೂಪದಲ್ಲಿ ಭೂ ಮಾಲೀಕರಿಗೆ ವಿತರಿಸಲಾಗಿದೆ. |
| (ಇ) | ಪರಿಹಾರ ನೀಡದೆ ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು; ಬಾಕಿ ಇರುವ ಪ್ರಕರಣಗಳಿಗೆ ಪರಿಹಾರ ವಿತರಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ? | ಭೂಸ್ವಾಧೀನ ಅಧಿನಿಯಮ 1894ರಲ್ಲಿ ಸೂಚಿಸಿರುವಂತೆ ಭೂಸ್ವಾಧಿನಾಧಿಕಾರಿಗಳು ತಾವು ಈ ಹಿಂದೆ ನಿರ್ಧರಿಸಿದ ಮಾರುಕಟ್ಟೆ ಬೆಲೆಯಂತೆ ಆಯಾ ಭೂಮಾಲೀಕರಿಗೆ ಪರಿಹಾರ ಹಣ ನೀಡಿರುತ್ತಾರೆ.<br>ಎಲ್ಲಿ ಭೂಮಾಲೀಕತ್ವದ ಕುರಿತು ವಿವಾದವಿದೆಯೋ ಅಲ್ಲಿ ಭೂಸ್ವಾಧಿನಾಧಿಕಾರಿಗಳು ಭೂಸ್ವಾಧೀನ ಅಧಿನಿಯಮ 1894ರ ಕಲಂ 31ರ ಪ್ರಕಾರ ನ್ಯಾಯಾಲಯದಲ್ಲಿ ಹಣ ಠೇವಣಿ ಮಾಡಿರುತ್ತಾರೆ. ಆದ ಕಾರಣ, ಪರಿಹಾರ ನೀಡದೇ ಇರುವ ಪ್ರಕರಣಗಳು ಇರುವುದಿಲ್ಲ. |

**ನಅಇ 31 ಎಸಿಜಿ 2026(ಇ)**

(ಬಿ. ಎಸ್. ಸುರೇಶ)
ನಗರಾಭಿವೃದ್ಧಿ ಹಾಗೂ ನಗರ ಯೋಜನ
ಸಚಿವರು